# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು-560003**

ಸಂಖ್ಯೆ : ಸಿ1/ಅಂ.ಪ.ರ/64/2012-13 ದಿನಾಂಕ :30-03-2013

## ಜ್ಞಾಪನ

ವಿಷಯ: 2012 ಅಕ್ಟೋಬರ್ ಮಾಹೆಯಲ್ಲಿ ನಡೆದ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಯ ಉತ್ತೀರ್ಣ ಮತ್ತು ಅನುತ್ತೀರ್ಣ ಅಂಕಪಟ್ಟಿಗಳನ್ನು ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ರವಾನಿಸುವ ಬಗ್ಗೆ.

******

2012 ಅಕ್ಟೋಬರ್ ಮಾಹೆಯಲ್ಲಿ ನಡೆದ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗೆ ಕುಳಿತು ಉತ್ತೀರ್ಣ ಮತ್ತು ಅನುತ್ತೀರ್ಣರಾದ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ರವಾನಿಸಲಾಗಿದೆ. ಈ ಬಗ್ಗೆ ಸಂಬಂಧಿಸಿದ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಅಭ್ಯರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಿಸುವ ಮೊದಲು ಈ ಕೆಳಕಂಡ ಅಂಶಗಳನ್ನು ಎಚ್ಚರಿಕೆಯಿಂದ ಗಮನಿಸಲು ಸೂಚಿಸಿದೆ. ಇಲ್ಲದಿದ್ದಲ್ಲಿ ಮುಂದಿನ ಆಗು ಹೋಗುಗಳಿಗೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

1. ನಿಮ್ಮ ಕೇಂದ್ರಕ್ಕೆ ಸಂಬಂಧಿಸಿದಂತೆ ಉತ್ತೀರ್ಣರಾದ ಮತ್ತು ಅನುತ್ತೀರ್ಣರಾದ ಎಲ್ಲಾ ಅಭ್ಯರ್ಥಿಗಳ ಅಂಕಪಟ್ಟಿ ಬಂದಿದೆಯೇ ಎಂದು ಪರಿಶೀಲಿಸುವುದು. ಕಡಿಮೆ ಇದ್ದಲ್ಲಿ ತಕ್ಷಣವೇ ಪರೀಕ್ಷಾ ಮಂಡಳಿಯ ಗಮನಕ್ಕೆ ತರುವುದು.
2. ಶಾಲಾ ಮುಖ್ಯಸ್ಥರು ಅಭ್ಯರ್ಥಿಯ ಉತ್ತೀರ್ಣ ಮತ್ತು ಅನುತ್ತೀರ್ಣ ಅಂಕಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ಎಸ್.ಎಸ್.ಎಲ್.ಸಿ.ಅಂಕಪಟ್ಟಿಯಲ್ಲಿದ್ದಂತೆ ಅಥವಾ ಶಾಲಾ ದಾಖಲಾತಿಯಲ್ಲಿದ್ದಂತೆ ಸ್ಪಷ್ಟವಾಗಿ ಇದೆಯೇ ಇಲ್ಲವೇ ಎಂಬುವುದನ್ನು ಗಮನಿಸಲು ತಿಳಿಸುವುದು.
3. ಅಭ್ಯರ್ಥಿಯ ಹೆಸರು, ತಂದೆಯ ಹೆಸರು ಹಾಗೂ ಅಡ್ಡ ಹೆಸರಿನಲ್ಲಿ ತಿದ್ದುಪಡಿ ಇದ್ದಲ್ಲಿ ಅಥವಾ ಅಂಕಪಟ್ಟಿಯಲ್ಲಿ ಕಾರ್ಯದರ್ಶಿಯವರ ಸಹಿ ಇಲ್ಲದೇ ಇದ್ದ ಸಂದರ್ಭದಲ್ಲಿ ಅಂತಹ ಮೂಲ ಅಂಕಪಟ್ಟಿಯನ್ನು ತಕ್ಷಣವೇ ಮಂಡಳಿಗೆ ಹಿಂದಿರುಗಿಸಿ ದೋಷ ತಿದ್ದುಪಡಿ ಮಾಡಿಸಿಕೊಳ್ಳತಕ್ಕದ್ದು.
4. ಅಭ್ಯರ್ಥಿಗಳ ಅಂಕಪಟ್ಟಿಯಲ್ಲಿ ದೋಷ ಇದ್ದಲ್ಲಿ ಸದರಿ ಅಭ್ಯರ್ಥಿಯ ವ್ಯಾಸಂಗ ಮಾಡಿದ/ಮಾಡುತ್ತಿರುವ ಶಾಲೆಯ ಮುಖ್ಯೋಪಾಧ್ಯಾಯರಿಂದ **ಎ.ಆರ್.ಇ. (Admission Register Extract) ಅಥವಾ ಟಿ.ಸಿ ಅಥವಾ ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡಿದ್ದಲ್ಲಿ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಸಂಬಂಧಿಸಿದ ಬಿ.ಇ.ಒ.ರವರಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.**
5. ಬೇರೆ ಕೇಂದ್ರದ ಅಂಕಪಟ್ಟಿಗಳು ತಮ್ಮ ಕೇಂದ್ರಕ್ಕೆ ಬಂದಲ್ಲಿ ಕೂಡಲೇ ಮರು ಟಪಾಲಿನಲ್ಲಿ **ಶ್ರೀಮತಿ ಶ್ರೀವಲ್ಲಿ ಎನ್. ಸಹಾಯಕ ನಿರ್ದೇಶಕರು, ಸಂಗೀತ ಶಾಖೆ, 4ನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03** ಈ ವಿಳಾಸಕ್ಕೆ ಸಲ್ಲಿಸಲು ತಿಳಿಸಿದೆ.
6. ಪ್ರತಿ ಶಾಲೆಗೆ ಸಂಬಂಧಿಸಿದಂತೆ, ಶಾಲಾ ಮುಖ್ಯಸ್ಥರಿಗೆ ಅಥವಾ ಅವರ ಪರವಾಗಿ ಪತ್ರ ತಂದವರಿಗೆ ಅಂಕಪಟ್ಟಿಗಳನ್ನು ವಿತರಿಸಲು ತಿಳಿಸಿದೆ. ಹಾಗೂ ಅಂಕಪಟ್ಟಿಗಳನ್ನು ಆದಷ್ಟೂ ಬೇಗ ಶಾಲೆಗಳಿಗೆ ವಿತರಿಸಲು ಕ್ರಮ ತೆಗೆದುಕೊಳ್ಳುವುದು.
7. ಶಾಲಾ ಮುಖ್ಯಸ್ಥರು ಪರೀಕ್ಷಾ ಕೇಂದ್ರಗಳಿಂದ ಅಂಕಪಟ್ಟಿಗಳನ್ನು ಒಂದು ತಿಂಗಳೊಳಗೆ ಪಡೆದುಕೊಳ್ಳಲು ತಿಳಿಸಿದೆ. ತಪ್ಪಿದಲ್ಲಿ ಮುಂದಿನ ಆಗುಹೋಗುಗಳಿಗೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರಾಗಲಿ ಅಥವಾ ಪರೀಕ್ಷಾ ಮಂಡಳಿಯವರಾಗಲಿ ಜವಾಬ್ದಾರರಾಗಿರುವುದಿಲ್ಲ. ಸಕಾಲಕ್ಕೆ ಅಂಕಪಟ್ಟಿಗಳನ್ನು ಪಡೆದುಕೊಳ್ಳದಿದ್ದಲ್ಲಿ ಸಂಸ್ಥೆಯ ಮುಖ್ಯಸ್ಥರೇ ಪೂರ್ಣ ಜವಾಬ್ದಾರರು.

**ಸೂಚನೆ : ಅಂಕಪಟ್ಟಿಯ ದೋಷ ತಿದ್ದುಪಡಿಯ ಪ್ರಕರಣಗಳಿಗೆ ಮಂಡಳಿ ನಿಯಮಾನುಸಾರ ರೂ. 100/- ಗಳ ಶುಲ್ಕ ವಿಧಿಸಿ ಸರಿಪಡಿಸಲಾಗುವುದು. ಸದರಿ ಮೊತ್ತವನ್ನು SECRETARY, KSEEB, BANGALORE ಈ ಪದನಾಮಕ್ಕೆ ಬ್ಯಾಂಕ್ ಹುಂಡಿಯನ್ನು ಅಥವಾ NEFT ಚಲನ್ ಮೂಲಕ ಪಾವತಿಸಿ ಮೂಲ ಅಂಕಪಟ್ಟಿ ಮತ್ತು ಮೇಲೆ ತಿಳಿಸಿದ ಯಾವುದಾದರೊಂದು ದಾಖಲೆಯೊಂದಿಗೆ ಸಲ್ಲಿಸತಕ್ಕದ್ದು.**

ಸಹಿ/-
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಯನ್ನು:**

1. ರಾಜ್ಯದ ಎಲ್ಲಾ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ
2. ಕಛೇರಿ ಪ್ರತಿ

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ**

**6ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು–560003**

ಸಂಖ್ಯೆ : ವಿ1/ಅಂ.ಪ.ರ/64/2012–13 ದಿನಾಂಕ :30–03–2013

ಗೆ,
ನಿರ್ದೇಶಕರು
ವಾರ್ತಾ ಮತ್ತು ಪ್ರಚಾರ ಇಲಾಖೆ
ಇನ್‌ಫೆಂಟ್ರಿ ರಸ್ತೆ, ಶಿವಾಜಿ ನಗರ,
ಬೆಂಗಳೂರು

ಮಾನ್ಯರೆ,

ವಿಷಯ : ಅಕ್ಟೋಬರ್–2012ರಲ್ಲಿ ನಡೆದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಯ ಅಂಕಪಟ್ಟಿಗಳನ್ನು ರವಾನಿಸಿದ ಬಗ್ಗೆ ಪತ್ರಿಕಾ ಪ್ರಕಟಣೆ ನೀಡುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಟೋಬರ್–2012ರಲ್ಲಿ ನಡೆದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಯ ಅಂಕಪಟ್ಟಿಗಳನ್ನು ರವಾನಿಸಿದ ಬಗ್ಗೆ ಪತ್ರಿಕಾ ಪ್ರಕಟಣೆ ನೀಡುವ ಕುರಿತು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪತ್ರಿಕಾ ಪ್ರಕಟಣೆಗಳನ್ನು ಈ ಪತ್ರಕ್ಕೆ ಅನುಬಂಧಿಸಿದ್ದು, ಅಧಿಕ ಪ್ರಸಾರದ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕೋರುತ್ತೇನೆ. ಸರ್ಕಾರದ ಪ್ರಕಟಣೆಯಾಗಿರುವುದರಿಂದ ಉಚಿತವಾಗಿ ಪ್ರಕಟಿಸಲು ಕೋರಿದೆ.

ತಮ್ಮ ನಂಬುಗೆಯ,

ಸಹಿ/–
ನಿರ್ದೇಶಕರು
(ಇತರೆ ಪರೀಕ್ಷೆಗಳು)

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು–560003**

ಸಂಖ್ಯೆ : ಐ1/ಅಂ.ಪ.ರ/64/2012–13 ದಿನಾಂಕ :30–03–2013

**ಸಂಗೀತ ಪರೀಕ್ಷೆಯ ಅಂಕಪಟ್ಟಿಗಳ ರವಾನೆ**

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಅಕ್ಟೋಬರ್–2012ರಲ್ಲಿ ನಡೆದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಯ ಉತ್ತೀರ್ಣ ಮತ್ತು ಅನುತ್ತೀರ್ಣ ಅಂಕಪಟ್ಟಿಗಳನ್ನು ರಾಜ್ಯದ 44 ಪರೀಕ್ಷಾ ಕೇಂದ್ರಗಳಿಗೆ ರವಾನಿಸಲಾಗಿದ್ದು, ಸಂಬಂಧಪಟ್ಟ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಶಾಲಾ/ಸಂಸ್ಥೆಯ ಮುಖ್ಯಸ್ಥರು, ಪರೀಕ್ಷಾ ಕೇಂದ್ರದ ಮುಖ್ಯಸ್ಥರನ್ನು ಸಂಪರ್ಕಿಸಿ ಅಂಕಪಟ್ಟಿಗಳನ್ನು ಪಡೆಯಲು ತಿಳಿಸಿದೆ.

ಸಹಿ/–
ನಿರ್ದೇಶಕರು
(ಇತರೆ ಪರೀಕ್ಷೆಗಳು)

## October- 2012 Music Exam Marks Card

Karnataka Secondary Education Examination Board has despatched OCT-2012 Music exam marks cards to all the Examination Centers all over the state. Heads of all the Music/Dance/Talavadya Institutions are requested to collect the marks cards from the concerned examination centers.

Sd/-

DIRECTOR
(OTHER EXAMINATIONS)